**ಸ್ಪೆಷಲ್ ಕೇಸ್ ನಂ.256/2019 ಪಿಡಬ್ಲ್ಯೂ.1**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 29.01.2025**

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ಡಿ ಆರ್ ವಕೀಲರಿಂದಃ**

1. ನನ್ನ ಷೆಡ್ ನಲ್ಲಿ ಸುಮಾರು 10 ಜನ ವಾಸ ಇದ್ದೆವು. ಘಟನೆಗಿಂತ ಒಂದು ವಾರ, 15 ದಿವಸದ ಹಿಂದೆ ಷೆಡ್ ನಾನು ಕಿತ್ತು ಹಾಕಿದ್ದೆ. ಆಗ ನಮ್ಮ ಮನೆಯವರೆಲ್ಲಾ ಅದೇ ಜಾಗದಲ್ಲಿ ಮಲಗುತ್ತಿದ್ದೆವು. ನನ್ನ ಜಾಗ ಮಂಡ್ಯ ನಗರಸಭೆಗೆ ಸೇರುತ್ತದೆಂದರೆ ಸರಿ. ಮನೆ ಕಟ್ಟುವ ಸಂಬಂಧ ನಗರಸಭೆಯಿಂದ ಲೈಸೆನ್ಸ್ ಪಡೆದುಕೊಂಡಿಲ್ಲ. ನನ್ನ ಜಾಗ ಯಾರಿಂದ ಬಂದಿತ್ತು ಎಂದು ನನಗೆ ಗೊತ್ತಿಲ್ಲ.ಆ ಜಾಗ ನಮಗೆ ಸೇರಿದ್ದು ಎಂದು ತೋರಿಸಲು ನಗರಸಭೆ ನೀಡಿರುವ ಯಾವುದೇ ದಾಖಲೆಗಳು ನನ್ನ ಬಳಿ ಇಲ್ಲ. ನನ್ನ ಬಳಿ ಯಾವುದೇ ನಿವೇಶನ, ಮನೆ ಇಲ್ಲ ಹೀಗಾಗಿ ಮನೆ ಕೊಡಿ ಎಂದು ಕೊಳಚೆ ನಿರ್ಮೂಲನಾ ಮಂಡಳಿಗೆ ಅರ್ಜಿ ಕೊಟ್ಟಿದ್ದೆ ಎಂದರೆ ಸರಿ. ಅವರು ನನಗೆ ಜಾಗ ಕೊಟ್ಟು ಮನೆ ಕಟ್ಟಿ ಕೊಡುತ್ತೇವೆಂದು ಹೇಳಿದ್ದರು. ಮನೆ ಕಟ್ಟಿಕೊಡುವವರಗೂ ನಾವು ತಾತ್ಕಾಲಿಕವಾಗಿ ಷೆಡ್ ನಲ್ಲಿದ್ದೆವು ಎಂದರೆ ಸರಿ.

2. ಷೆಡ್ ಹಾಕಲು ಹೋದಾಗ 1ನೇ ಆರೋಪಿ ನಮ್ಮ ಮೇಲೆ ಠಾಣೆಗೆ ದೂರು ನೀಡಿದ್ದರು ಎಂದರೆ ಸರಿ. ಆಗ ಪೊಲೀಸರು ನನ್ನನ್ನು ಹಾಗೂ ನಮ್ಮ ಕುಟುಂಬದವರನ್ನು ಠಾಣೆಗೆ ಕರೆಯಿಸಿ ಜಾಗ ನಮ್ಮದಲ್ಲ ಅದು 1ನೇ ಆರೋಪಿಗೆ ಸೇರಿದ್ದು, ಜಾಗ ಖಾಲಿ ಮಾಡಿಕೊಡಿ ಎಂದು ಹೇಳಿದ್ದರು ಎಂದರೆ ಸರಿ. ಘಟನೆ ನಡೆಯಿತು ಎಂದು ಹೇಳುವ ಸಮಯದಲ್ಲಿ ಠಾಣೆಯಲ್ಲಿ ನಾನು ಇದ್ದೆ. ಠಾಣೆಯಲ್ಲಿ 1ನೇ ಆರೋಪಿ ಕೂಡ ಇದ್ದ. ಠಾಣೆಯಲ್ಲಿ ಪೊಲೀಸರ ಮುಂದೆ ಜಾಗ ನನ್ನದು ಎಂದು ತೋರಿಸುವ ಯಾವುದೇ ದಾಖಲೆಯನ್ನು ನಾನು ಕೊಟ್ಟಿರಲಿಲ್ಲ ಎಂದರೆ ಸರಿ. ನಾನು 1ನೇ ಆರೋಪಿಯ ಜಾಗದಲ್ಲಿ ಅಕ್ರಮವಾಗಿ ಇದ್ದೆ ಎಂದರೆ 80 ವರ್ಷದಿಂದಲೂ ಅಲ್ಲೇ ಇದ್ದೇನೆ.

3. ನಾನು ಕಟ್ಟಡ ಕಟ್ಟುತ್ತಿರುವ ಜಾಗದ ಅಕ್ಕ ಪಕ್ಕ ವಾಸದ ಮನೆಗಳು ಇವೆ. ಕಟ್ಟಡ ಕಾಮಗಾರಿ ಮಾಡುವ ಸಮಯದಲ್ಲಿ ಸ್ಥಳಕ್ಕೆ ಪೊಲೀಸರೊಂದಿಗೆ 1 ನೇ ಆರೋಪಿ

ಬಂದಿದ್ದನು, ಆಗ ಕೂಡ ಪೊಲೀಸರು ಜಾಗ 1 ನೇ ಆರೋಪಿಯದ್ದು ಇಲ್ಲಿ ಕಟ್ಟಡ ಕಟ್ಟಬೇಡಿ ಎಂದು ತಿಳುವಳಿಕೆ ಹೇಳಿದ್ದರು ಎಂದರೆ ಸರಿ.

4. ದೂರು ಕೊಡುವ ಮುನ್ನ 1 ನೇ ಆರೋಪಿ ನನ್ನ ಹಾಗೂ ನನ್ನ ಮನೆಯವರ ಮೇಲೆ ದೂರು ಕೊಟ್ಟಿದ್ದನು ಎಂದರೆ ಸರಿ. ಆಸ್ತಿ ನಮಗೆ ಸೇರಿದ್ದು ಎಂದು ಸಿವಿಲ್ ನ್ಯಾಯಾಲಯದಲ್ಲಿ ಕೇಸು ಹಾಕಿಲ್ಲ ಎಂದರೆ ಸರಿ. ನನ್ನನ್ನು ಸ್ಥಳದಿಂದ ಖಾಲಿ ಮಾಡಿಸುವ ಸಂಬಂಧ 1 ನೇ ಆರೋಪಿ ನನ್ನ ಮೇಲೆ ಓ ಎಸ್ 508/2019 ದಾವೆ ಹೂಡಿದ್ದನು ಎಂದರೆ ಸರಿ.

5. ನಿಪಿ.1 ಅನ್ನು ಯಾರು ಬರೆದರು, ಅದರಲ್ಲಿ ಏನು ಬರೆದಿದ್ದಾರೆಂದು ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಹೇಳಿದ್ದರಿಂದ ಅದಕ್ಕೆ ನಾನು ಹೆಬ್ಬೆಟ್ಟು ಗುರುತು ಹಾಕಿದ್ದೇನೆ. ನಿಪಿ.1 ಕೊಡುವ ಪೂರ್ವದಲ್ಲಿ ನಾನು ಆಸ್ಪತ್ರೆಗೆ ಹೋಗಿರಲಿಲ್ಲ. ಠಾಣೆಗೆ ನಾನು ಹೋಗಿದ್ದಾಗ ಪೊಲೀಸರು ಕೆಲವು ದಾಖಲೆಗೆ ನನ್ನ ಹೆಬ್ಬೆಟ್ಟು ತೆಗೆದುಕೊಂಡರು. ಅದರಲ್ಲಿ ಪೊಲೀಸರು ಏನು ಬರೆದುಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ.

6. ನಾನು ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡುತ್ತಿದ್ದಾಗ 1 ನೇ ಆರೋಪಿ ಕೇಳಿದ್ದಕ್ಕೆ ನಾನು ಹಲ್ಲೆ ಮಾಡಿದ್ದು ಆತ ನನ್ನ ವಿರುದ್ಧ ದೂರು ಸಲ್ಲಿಸಿ ಇದೇ ನ್ಯಾಯಾಲಯದಲ್ಲಿ ನಡೆಯುತ್ತಿದೆ ಎಂದರೆ ಸರಿ. ಆ ಕೇಸಿನಲ್ಲಿ ನಾನು ಪರಾರಿಯಾಗಿದ್ದೆ. ಪ್ರಕರಣದಲ್ಲಿ ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿಲ್ಲ ಎಂದರೆ ನನಗೆ ಗೊತ್ತಿಲ್ಲ.

7. ನನ್ನ ಮುಖ್ಯ ವಿಚಾರಣೆಯ ಕಂಡಿಕೆ 1 ರಲ್ಲಿ ಹೇಳಿರುವ ಹಾಗೇ "ನಾನು ನನ್ನ ತಾತನ ಕಾಲದಿಂದಲೂ ಗಾಂಧಿನಗರ, 6 ನೇ ಕ್ರಾಸ್ ನಲ್ಲಿ ಷೆಡ್ ಹಾಕಿಕೊಂಡು ವಾಸ ಇದ್ದೇನೆ. ನನ್ನ ಜಾಗಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ" ಎಂದು ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆಯ ಕಂಡಿಕೆ 2 ರಲ್ಲಿ ಹೇಳಿರುವ ಹಾಗೇ "ದಿನಾಂಕ 30.08.2019 ರಂದು ನನ್ನ ಷೆಡ್ ನ ಹತ್ತಿರ ಸುಮಾರು 12 ಜನ ಆರೋಪಿತರು ಅಕ್ರಮ ಗುಂಪು

ಕಟ್ಟಿಕೊಂಡು ಬಂದು ಹೊಲೆಯ ನನ್ನ ಮಗನೇ ಇವನನ್ನು ಬಿಡಬೇಡಿ ಈ ಸೈಟು ನಮಗೆ ಸೇರಿದ್ದು ಇದನ್ನು ನಾನು ಖಾತೆ ಮಾಡಿಸಿಕೊಂಡಿದ್ದೇನೆ, ನಿಮ್ಮನ್ನು, ನಿಮ್ಮ ಕುಟುಂಬದವರನ್ನು ಸಾಯಿಸದೇ ಬಿಡುವುದಿಲ್ಲ ಎಂದು ಬೈದು ಬೆದರಿಕೆ ಹಾಕಿದರು" ಎಂದು ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯ ಕಂಡಿಕೆ 2 ರಲ್ಲಿ ಹೇಳಿರುವ ಹಾಗೇ "ಷೆಡ್ ಅನ್ನು ಕಿತ್ತು ಹಾಕಿ ಹೊಸದಾಗಿ ಮನೆ ಕಟ್ಟುತ್ತಿದ್ದೆವು, ಆರೋಪಿತರು ಕಟ್ಟಿದ ಮನೆಯನ್ನು ಹಾರೆಯಿಂದ ಉರುಳಿಸಿ ಹಾಕಿದರು" ಎಂದು ಪೊಲೀಸರ ಮುಂದೆ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ.

8. ದೂರು ಕೊಟ್ಟ ನಂತರ ನಾನು ಠಾಣೆಗೆ ಹೋಗಿರಲಿಲ್ಲ ಎಂದರೆ ಸರಿ. ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ ಆರೋಪಿತರನ್ನು ತೋರಿಸಿದ್ದರು ಎಂಬ ವಿಷಯ ನನ್ನ ಮರುಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ನನಗೆ ಆರೋಪಿತರು ಹಲ್ಲೆ ಮಾಡಿ ಜಾತಿ ನಿಂದನೆ ಮಾಡಿ, ಆಸ್ತಿಗೆ ಹಾನಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಷೆಡ್ ಹಾಕಿದ್ದ ಜಾಗ ನನ್ನದ್ದಲ್ಲ, ಅದು 1 ನೇ ಆರೋಪಿಯದ್ದು ಅಲ್ಲಿ ನಾನು ಅಕ್ರಮವಾಗಿ ಷೆಡ್ ಹಾಕಿದ್ದೇನೆಂದರೆ ಸರಿಯಲ್ಲ. ಆಸ್ತಿಯನ್ನು ಹೇಗಾದರೂ ಮಾಡಿ ಲಪಟಾಯಿಸಿಕೊಳ್ಳಬೇಕೆಂದು ಆರೋಪಿತರ ವಿರುದ್ಧ ಸುಳ್ಳು ಕೇಸು ಹಾಕಿದ್ದೇನೆಂದರೆ ಸರಿಯಲ್ಲ. ಮು.ಮಾ.1 ರಿಂದ 4 ಅನ್ನು ಕೇಸಿಗಾಗಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಯಾವುದೇ ಸ್ಥಳ ಮಹಜರ್ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

(ಮರು ವಿಚಾರಣೆಃಇಲ್ಲ)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ನಿರ್ಮಲ ಕೆ.)

C/c 5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಮಂಡ್ಯ.